ಕರ್ನಾಟಕ ಸರ್ಕಾರ

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003.**

ಸಂಖ್ಯೆ: ಸಿ1/SSLC-2019/ಮೌ.ಮಾ.ಕೇಂ/47/2019–20 ದಿನಾಂಕ: 09.07.2020

ಉಪನಿರ್ದೇಶಕರು (ಆಡಳಿತ),
ಸಾರ್ವಜನಿಕ ಶಿಕ್ಷಣ ಇಲಾಖೆ,

____________________ ಜಿಲ್ಲೆ,

____________________

ಮಾನ್ಯರೇ,

**ವಿಷಯ:** ಮೌಲ್ಯಮಾಪನ ಕೇಂದ್ರಗಳಲ್ಲಿ ಸುರಕ್ಷಿತ ಮೌಲ್ಯಮಾಪನಕ್ಕಾಗಿ ಕೈಗೊಂಡಿರುವ ಕ್ರಮಗಳ ಕುರಿತು ಕರಪತ್ರಗಳನ್ನು ಮಾಡಿಸಿ ಪ್ರಕಟಿಸುವ ಬಗ್ಗೆ ಹಾಗೂ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ವ್ಯವಸ್ಥೆ ಮಾಡಿಕೊಂಡಿರುವ ಬಗ್ಗೆ ಅಣಕು ಪ್ರದರ್ಶನ ಮಾಡುವ ಕುರಿತು.

**ಉಲ್ಲೇಖ:**
1. ಸಂಖ್ಯೆ: ಸಿ1/SSLC-2020/ಮೌ.ಮಾ/SOP/11/2020–21, ದಿನಾಂಕ:02.07.2020
2. ದಿನಾಂಕ: 08.07.2020ರಂದು ಜಂಟಿ ಮುಖ್ಯ ಮೌಲ್ಯಮಾಪಕರ ತರಬೇತಿಯ ವೀಡಿಯೋ ಕಾನ್ಫರೆನ್ಸ್‌ನಲ್ಲಿ ನೀಡಿರುವ ಮಾಹಿತಿ

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 13.07.2020ರಿಂದ ರಾಜ್ಯಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಮೌಲ್ಯಮಾಪನ ಪ್ರಾರಂಭವಾಗುತ್ತಿದೆ. ಮೌಲ್ಯಮಾಪನ ಕೇಂದ್ರಗಳಲ್ಲಿ ಸುರಕ್ಷಿತ ಮೌಲ್ಯಮಾಪನ ಪ್ರಕ್ರಿಯೆಗೆ ತೆಗೆದುಕೊಳ್ಳಲಾಗಿರುವ ಅಂಶಗಳ ಕುರಿತು ಕರಪತ್ರವನ್ನು ಸಿದ್ಧಪಡಿಸಿ ಈ ಪತ್ರದೊಂದಿಗೆ ಲಗತ್ತಿಸಿದೆ. ಸದರಿ ಕರಪತ್ರಗಳನ್ನು ಸಾರ್ವಜನಿಕವಾಗಿ ಪ್ರಕಟಿಸಲು ಕ್ರಮ ತೆಗೆದುಕೊಳ್ಳುವುದು ಹಾಗೂ ಮೌಲ್ಯಮಾಪನದ ಸೂಚನಾ ಫಲಕಗಳಲ್ಲಿ ಪ್ರಕಟಿಸುವುದು.

ಮೇಲ್ಕಾಣಿಸಿದ ಉಲ್ಲೇಖಗಳನ್ವಯ ಮೌಲ್ಯಮಾಪನ ಕೇಂದ್ರಗಳಲ್ಲಿ ಮೌಲ್ಯಮಾಪನ ಕೊಠಡಿಗಳನ್ನು ಸ್ಯಾನಿಟೈಸ್ ಮಾಡಿಸುವುದು, ಮೌಲ್ಯಮಾಪನ ಕೇಂದ್ರದ ದ್ವಾರದಲ್ಲಿ ಮೂರು ಅಡಿ ಅಂತರವಿರುವಂತೆ ಚೌಕಗಳನ್ನು ನಿರ್ಮಿಸಿರುವುದು, ಆರೋಗ್ಯ ತಪಾಸಣಾ ಕೌಂಟರ್ ನಿರ್ಮಾಣ ಮಾಡಿರುವುದು, ಚೌಕಗಳ ಮುಖಾಂತರ ಮೌಲ್ಯಮಾಪಕರು ಮೌಲ್ಯಮಾಪನ ಕೇಂದ್ರಕ್ಕೆ ಒಳ ಪ್ರವೇಶಿಸುವುದು, ಮೌಲ್ಯಮಾಪಕರು ಕೈಗಳನ್ನು ಸ್ಯಾನಿಟೈಸ್ ಮಾಡಿಕೊಳ್ಳುವುದು, ಮೌಲ್ಯಮಾಪನ ಕೊಠಡಿಯಲ್ಲಿ ಆಸನದ ವ್ಯವಸ್ಥೆಯ ಡೆಸ್ಕುಗಳ ಅಂತರ ಕಾಪಾಡಿಕೊಂಡಿರುವುದು, ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಿರುವುದು ಮುಂತಾದ ಅಂಶಗಳ ಕುರಿತು ದಿನಾಂಕ: 11.07.2020ರೊಳಗೆ ಅಣಕು ಪ್ರದರ್ಶನ ಮಾಡಿಕೊಂಡು ಸಿದ್ಧತೆ ಮಾಡಿಕೊಳ್ಳಲು ಸೂಚಿಸಿದೆ.

ತಮ್ಮ ನಂಬುಗೆಯ,

(ವಿ.ಸುಮಂಗಲ) 9/7
ನಿರ್ದೇಶಕರು (ಪರೀಕ್ಷೆಗಳು)

ಪ್ರತಿಯನ್ನು:
ರಾಜ್ಯದ ಎಲ್ಲಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಅಗತ್ಯ ಕ್ರಮಕ್ಕಾಗಿ.

# ಸುರಕ್ಷಿತ ಮೌಲ್ಯಮಾಪನ ಪ್ರಕ್ರಿಯೆಗೆ ಕೈಗೊಂಡಿರುವ ಕ್ರಮಗಳು

1. ದಿನಾಂಕ: 13.07.2020ರಂದು ರಾಜ್ಯಾದ್ಯಂತ ಜಿಲ್ಲಾಕೇಂದ್ರಗಳಲ್ಲಿ ಒಟ್ಟಾರೆ ವಿಷಯವಾರು 228 ಮೌಲ್ಯಮಾಪನ ಕೇಂದ್ರಗಳಲ್ಲಿ ಹೆಚ್ಚುವರಿಯಾಗಿ 109 ಕಂಪ್ಯೂಟರ್ ಯೂನಿಟ್‌ಗಳನ್ನು ರಚಿಸಲಾಗಿದೆ.
2. ರಾಜ್ಯಾದ್ಯಂತ ವಿವಿಧ ವಿಷಯವಾರು 71154 ಮೌಲ್ಯಮಾಪಕರು (ಜಂಟಿ ಮುಖ್ಯ ಮೌಲ್ಯಮಾಪಕರು ಮತ್ತು ಉಪಮುಖ್ಯ ಮೌಲ್ಯಮಾಪಕರು ಒಳಗೊಂಡಂತೆ) ಮೌಲ್ಯಮಾಪನಕ್ಕೆ ಹಾಜರಾಗಲು ನೇಮಕಾತಿ ಆದೇಶವನ್ನು ನೀಡಲಾಗಿದೆ.
3. ಪ್ರತಿ ಮೌಲ್ಯಮಾಪನ ಕೇಂದ್ರದ 200 ಮೀಟರ್ ಸುತ್ತಾ ನಿಷೇಧಿತ ಪ್ರದೇಶವೆಂದು ಜಿಲ್ಲಾಧಿಕಾರಿಗಳಿಂದ ಘೋಷಿಸಲಾಗಿದೆ.
4. ಪ್ರತಿ ಮೌಲ್ಯಮಾಪನ ಕೇಂದ್ರವನ್ನು ಮೌಲ್ಯಮಾಪನ ಕಾರ್ಯ ಪ್ರಾರಂಭವಾಗುವ ಮೊದಲು ಸೋಂಕು ನಿವಾರಕ ದ್ರಾವಣದಿಂದ ಸ್ಯಾನಿಟೈಜ್ ಮಾಡಲು ಕ್ರಮವಹಿಸಲಾಗಿದೆ.
5. ಪ್ರತಿ ದಿನದ ಮೌಲ್ಯಮಾಪನ ಕಾರ್ಯ ಮುಗಿದ ನಂತರ ಕೇಂದ್ರದ ಎಲ್ಲಾ ಕೊಠಡಿಗಳು/ಪೀಠೋಪಕರಣಗಳನ್ನು ಸ್ಯಾನಿಟೈಸ್ ಮಾಡಲು ಸೂಚಿಸಿದೆ.
6. ಮೌಲ್ಯಮಾಪನ ಕೇಂದ್ರದಲ್ಲಿ ಎಲ್ಲಾ ಹಂತದಲ್ಲಿ ಶಿಕ್ಷಕರು, ಅಧಿಕಾರಿ ಹಾಗು ಸಿಬ್ಬಂದಿಗಳು ಕನಿಷ್ಠ ಒಂದು ಮೀಟರ್ ದೈಹಿಕ ಅಂತರವನ್ನು ಕಾಪಾಡಿಕೊಳ್ಳುವುದನ್ನು ಕಡ್ಡಾಯ ಮಾಡಲಾಗಿದೆ.
7. ಮೌಲ್ಯಮಾಪಕರು ತಮಗೆ ನಿಗಧಿಪಡಿಸಿದ ಕೊಠಡಿಯ ಒಳಗೆ ತೆರಳಿ ಮೌಲ್ಯಮಾಪನ ಕಾರ್ಯ ಆರಂಭಿಸಲು ಅನುಕೂಲವಾಗುವಂತೆ ಬ್ಯಾಚ್‌ವೈಸ್ ಮೌಲ್ಯಮಾಪಕರ ಪಟ್ಟಿ ಹಾಗೂ ಕೊಠಡಿಯ ಸಂಖ್ಯೆ/ಕೊಠಡಿಯ ನಕ್ಷೆಯನ್ನು ಕೇಂದ್ರದ ಆವರಣದ ಸೂಚನಾ ಫಲಕದಲ್ಲಿ ಎರಡು ಅಥವಾ ಮೂರು ಕಡೆ ಪ್ರದರ್ಶಿಸಲಾಗಿದೆ.
8. ಮೌಲ್ಯಮಾಪಕರು ತಮಗೆ ನಿಗಧಿಪಡಿಸಿದ ಕೊಠಡಿಗಳಿಗೆ ದೈಹಿಕ ಅಂತರ ಕಾಯ್ದುಕೊಂಡು ತೆರಳುವುದು. ಯಾವ ಸಂದರ್ಭದಲ್ಲೂ ಶಿಕ್ಷಕರು ಗುಂಪುಗೂಡುವಿಕೆಗೆ ಅವಕಾಶ ಇರುವುದಿಲ್ಲ.
9. ಪ್ರತಿ ಮೌಲ್ಯಮಾಪಕರು ತಮ್ಮದೇ ಆದ ಕುಡಿಯುವ ನೀರಿನ ಬಾಟಲ್, ವೈಯುಕ್ತಿಕ ಸ್ಯಾನಿಟೈಸರ್, ಮಾಸ್ಕ್, ಛತ್ರಿ (ಕೊಡೆ) ಹಾಗೂ ಆಹಾರದ ಡಬ್ಬಿಯನ್ನು ಕಡ್ಡಾಯವಾಗಿ ತರುವುದು. ಆದಾಗ್ಯೂ ಶುದ್ಧ ಕುಡಿಯುವ ನೀರು ಹಾಗೂ ಡಿಸ್ಪೋಸೆಬಲ್ ಲೋಟಗಳ ವ್ಯವಸ್ಥೆಯನ್ನು ಕೇಂದ್ರದಲ್ಲಿ ಮಾಡಲಾಗಿದೆ.
10. ಮೌಲ್ಯಮಾಪನ ಕೇಂದ್ರದ ಪ್ರವೇಶ ದ್ವಾರದಲ್ಲಿ ಚೌಕಗಳನ್ನು ಬರೆಯಬೇಕು ಮತ್ತು ಶಿಕ್ಷಕರು ಅವುಗಳ ಮೂಲಕವೇ **"ಆರೋಗ್ಯ ತಪಾಸಣಾ ಕೌಂಟರ್"** ಕಡೆಗೆ ತೆರಳಬೇಕು. ಈ ಚೌಕಗಳ ನಡುವೆ ಕನಿಷ್ಠ ಮೂರು ಅಡಿ ಅಂತರವಿರುತ್ತದೆ.
11. ಮೌಲ್ಯಮಾಪನ ಕೇಂದ್ರದ ಒಳಗಡೆ ನಿಯೋಜಿತ ಮೌಲ್ಯಮಾಪಕರು ಹಾಗೂ ಸಿಬ್ಬಂದಿಯನ್ನು ಹೊರತುಪಡಿಸಿ ಯಾವುದೇ ಇತರೆ ವ್ಯಕ್ತಿಗಳ ಪ್ರವೇಶವನ್ನು ಕಡ್ಡಾಯವಾಗಿ ನಿರ್ಬಂಧಿಸಿದೆ.

12. ಮೌಲ್ಯಮಾಪನ ಕೇಂದ್ರಗಳಿಗೆ ಪ್ರವೇಶಿಸುವ ಎಲ್ಲಾ ಶಿಕ್ಷಕರು, ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಕಡ್ಡಾಯವಾಗಿ **"ಆರೋಗ್ಯ ತಪಾಸಣಾ ಕೌಂಟರ್"** ಮೂಲಕ ತಪಾಸಣೆಗೆ ಒಳಪಡಿಸಿ, ಕೈಗಳ ಸ್ಯಾನಿಟೈಸ್ ಹಾಗೂ ಮಾಸ್ಕ್ ಧಾರಣೆಯನ್ನು ಖಚಿತ ಮಾಡಿಕೊಂಡ ನಂತರವೇ ಮೌಲ್ಯಮಾಪನ ಕೇಂದ್ರದೊಳಗೆ ಹೋಗಲು ಅನುಮತಿಸಲಾಗುವುದು.

13. **"ಆರೋಗ್ಯ ತಪಾಸಣಾ ಕೌಂಟರ್"**ನಲ್ಲಿ ಥರ್ಮಲ್ ಸ್ಕ್ಯಾನರ್‌ನಿಂದ ತಪಾಸಣೆ ಮಾಡಿದ ನಂತರ ನಿಗದಿತ ತಾಪಕ್ಕಿಂತ (Temperature) ಹೆಚ್ಚು ಕಂಡು ಬಂದಲ್ಲಿ ಆರೋಗ್ಯ ಸಿಬ್ಬಂದಿಯು ಮೌಲ್ಯಮಾಪನ ಕೇಂದ್ರದ ಜಂಟಿ ಮುಖ್ಯ ಮೌಲ್ಯಮಾಪಕರ ಗಮನಕ್ಕೆ ತಂದು, ಅಂತಹ ಮೌಲ್ಯಮಾಪಕರನ್ನು ಮೌಲ್ಯಮಾಪನ ಕರ್ತವ್ಯದಿಂದ ಬಿಡುಗಡೆ ಮಾಡಲು ಜಂಟಿ ಮುಖ್ಯ ಮೌಲ್ಯಮಾಪಕರು ಅಗತ್ಯ ಕ್ರಮ ತೆಗೆದುಕೊಳ್ಳುತ್ತಾರೆ.

14. ಒಂದು ವೇಳೆ ಯಾರಾದರೂ ಶಿಕ್ಷಕರು ಕೋವಿಡ್ ಪಾಸಿಟೀವ್ ಇದ್ದಲ್ಲಿ ಅಥವಾ ಕ್ವಾರಂಟೈನ್‌ಗೆ ಒಳಗಾಗಿದ್ದರೆ ಅಥವಾ ವೈದ್ಯಕೀಯ ತಪಾಸಣೆಗೆ ಒಳಗಾಗಿದ್ದು ವರದಿಯ ನಿರೀಕ್ಷೆಯಲ್ಲಿದ್ದರೆ, ಅಂತಹ ಶಿಕ್ಷಕರನ್ನು ಯಾವುದೇ ಕಾರಣಕ್ಕೂ ಮೌಲ್ಯಮಾಪನ ಕಾರ್ಯಕ್ಕೆ ತೆಗೆದುಕೊಳ್ಳುವುದಿಲ್ಲ.

15. ಒಂದು ಡೆಸ್ಕ್‌ನಲ್ಲಿ ಗರಿಷ್ಠ ಇಬ್ಬರು ಶಿಕ್ಷಕರು ಮಾತ್ರ ಕುಳಿತುಕೊಳ್ಳುವಂತೆ ಕ್ರಮವಹಿಸಿದೆ.

16. ಒಂದು ಡೆಸ್ಕ್‌ನಿಂದ ಇನ್ನೊಂದು ಡೆಸ್ಕ್‌ಗೆ ಕನಿಷ್ಠ ಮೂರು ಅಡಿ ಅಂತರವನ್ನು ಕಾಯ್ದುಕೊಳ್ಳುವುದು. ಇದಕ್ಕನುಗುಣವಾಗಿ ಮೌಲ್ಯಮಾಪನ ತಂಡದ ಆಸನ ವ್ಯವಸ್ಥೆ ಮಾಡಲಾಗಿದೆ.

17. ಮೌಲ್ಯಮಾಪನದ ಕೊಠಡಿಯಲ್ಲಿ ಮೌಲ್ಯಮಾಪಕರು ಉತ್ತರಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವಾಗ ಆಗಿಂದಾಗ್ಗೆ ಸುರಕ್ಷತಾ ದೃಷ್ಟಿಯಿಂದ ತಮ್ಮ ವೈಯಕ್ತಿಕ ಸ್ಯಾನಿಟೈಸರ್‌ನಿಂದ ಕೈಗಳನ್ನು ಶುಚಿಗೊಳಿಸಿಕೊಳ್ಳಲು ತಿಳಿಸಿದೆ.

18. ಮೌಲ್ಯಮಾಪನ ಕೇಂದ್ರಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರಿನ ಸೌಲಭ್ಯವಿರುವ, ಸ್ವಚ್ಛವಾಗಿರುವ, ಶೌಚಾಲಯಗಳ ವ್ಯವಸ್ಥೆ ಮಾಡಲಾಗಿದೆ.

19. ಶೌಚಾಲಯಗಳಲ್ಲಿ ಸೋಪು/ಹ್ಯಾಂಡ್ ವಾಷ್ ಲಿಕ್ವಿಡ್ ಸೋಪು, ಸ್ಯಾನಿಟೈಸರ್ ಇರುವಂತೆ ಕ್ರಮವಹಿಸಿದೆ.

20. ಶೌಚಾಲಯಗಳನ್ನು ಆಗಿಂದಾಗ್ಗೆ ಫಿನಾಯಿಲ್ ಹಾಕಿಸಿ ಸ್ವಚ್ಛ ಮಾಡಿಸಲು ಕ್ರಮತೆಗೆದುಕೊಳ್ಳುವಂತೆ ಸೂಚಿಸಿದೆ.

21. ಶೌಚಾಲಯಗಳಲ್ಲಿ ಫ್ಲಷ್ ವ್ಯವಸ್ಥೆ ಇಲ್ಲದಿದ್ದಲ್ಲಿ, ನೀರಿನ ಡ್ರಂಗಳಲ್ಲಿ ಡೆಟಾಲ್ ಅಥವಾ ಲೈಜಾಲ್ ಮಿಶ್ರಿತ ನೀರನ್ನು ಸಂಗ್ರಹಿಸಿಡಲು ಸೂಚಿಸಿದೆ.

(ವಿ.ಸುಮಂಗಲ)
ನಿರ್ದೇಶಕರು (ಪರೀಕ್ಷೆಗಳು)